O.S .No. 370/2015
DW-2

ದಿನಾಂಕ: 30-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ವಿ.ಕೆ. ವಕೀಲರಿಂದಃ**

ಈ ದಿನ ನ್ಯಾಯಾಲಯಕ್ಕೆ 3 ನೇ ಪ್ರತಿವಾದಿ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. 3 ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವಂತೆ ಹೇಳಿ ಕರೆತಂದಿರುತ್ತಾರೆಂದರೆ ಸರಿ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ದಾವೆಯನ್ನು ಪಾತಿಮಾ ಹೂಡಿರುತ್ತಾರೆ. ದಾವೆಯನ್ನು ಸ.ನಂ.47 ಕ್ಕೆ ಸಂಬಂಧಿಸಿದಂತೆ ಹೂಡಿರುತ್ತಾರೆ. ದಾವಾ ಆಸ್ತಿಯ ಪಕ್ಕದಲ್ಲಿ ನನಗೆ ಸೇರಿದ ಜಮೀನು ಇದೆ. ನನಗೆ ಸೇರಿದ ಜಮೀನಿನ ಸ.ನಂ.10. ದಾವಾ ಆಸ್ತಿಗೆ ಚೆಕ್ಕುಬಂಧಿ ಪೂರ್ವಕ್ಕೆಃ ವೆಂಕಟಯ್ಯನ ಜಮೀನು, ಪಶ್ಚಿಮಕ್ಕೆಃ ಲೋಕೇಶ ರವರ ಜಮೀನು, ದಕ್ಷಿಣಕ್ಕೆಃ ಗ್ರಾಮಾ ಠಾಣಾ, ಉತ್ತರಕ್ಕೆಃ ನಾಲೆ. ನಮ್ಮ ಜಮೀನಿಗೂ ಹಾಗೂ ದಾವಾ ಆಸ್ತಿಗೂ ಅರ್ಧ ಕಿ.ಮೀ ಅಂತರ ಇದೆ. ವೆಂಕಟಯ್ಯನ ಜಮೀನಿನ ಪೂರ್ವಕ್ಕೆ ಕರೀಂಸಾಬ್ ರವರ ಜಮೀನು ಇದೆ. ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿ ಹೇಗೆ ಬಂತು ಎಂದು ಗೊತ್ತು ಎಂದು ಬರೆಸಿದ್ದು, ಅದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಬರೆಸಬೇಕಾದರೆ ನಾನು ಇರಲಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ಅಬ್ದುಲ್ ಮಜೀದ್ ರವರಿಗೆ ಹೇಗೆ ಬಂತು ಎಂದರೇ ಸಾಕ್ಷಿ ದರಕಾಸ್ತು ಜಮೀನು ಮಾಡಿದ್ದರು ಎಂದು ಹೇಳುತ್ತಾರೆ. ಅಬ್ದುಲ್ ಮಜೀದ್ ರವರು ಮುಸ್ಲಿಂ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಕಾಳೇನಹಳ್ಳಿಯಲ್ಲಿ ಮುಸ್ಲಿಂ ಜನಾಂಗದ ಸುಮಾರು 30 ಕುಟುಂಬ ಇದೆ.

ಅಬ್ದುಲ್ ಮಜೀದ್ ರವರಿಗೆ ಕಾಳೇನಹಳ್ಳಿಯಲ್ಲಿ ಅವರ ಜನಾಂಗದವರೆಲ್ಲ ಸಂಬಂಧಿಗಳು ಎಂದರೆ ಸರಿ. ಅಬ್ದುಲ್ ಮಜೀದ್ ರವರೇ ದಾವಾ ಆಸ್ತಿಯನ್ನು ಅವರು ಇರುವವರೆಗೂ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಅಬ್ದುಲ್ ಮಜೀದ್ ರವರು ವ್ಯವಸಾಯ ಮಾಡುತ್ತಿದ್ದ ಜಮೀನಿನ ಪಕ್ಕದಲ್ಲಿ ಪ್ರತಿವಾದಿಗಳ ತಂದೆಗೆ ಸೇರಿದ ಜಮೀನು ಇದೆ ಎಂದರೆ ಸರಿ. ಪ್ರತಿವಾದಿಗಳ ತಂದೆಗೆ ಸೇರಿದ ಜಮೀನಿಗೆ ಚೆಕ್ಕುಬಂಧಿ ಪೂರ್ವಕ್ಕೆಃ ಚೆನ್ನಮ್ಮ ರವರ ಜಮೀನು, ಪಶ್ಚಿಮಕ್ಕೆಃ ವೆಂಕಟಯ್ಯ, ಉತ್ತರಕ್ಕೆಃ ನಾಲೆ. ವಾದಿಯರ ಜಮೀನನ್ನು ಕಬಳಿಸಲು ಪ್ರತಿವಾದಿಗಳೊಂದಿಗೆ ಸೇರಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಬ್ದುಲ್ ಮಜೀದ್ ರವರು ಮರಣ ಶಾಸನ ಮಾಡಿದ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಬ್ದುಲ್

ಮಜೀದ್ ರವರು ಸಾಯುವ ಕಾಲಕ್ಕೆ ಅವರ ಸಂಬಂಧಿಗಳೊಂದಿಗೆ ಇದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪ್ರತಿವಾದಿಗಳೇ ನೋಡಿಕೊಳ್ಳುತಿದ್ದರು ಎಂದು ಹೇಳುತ್ತಾರೆ. ಅಬ್ದುಲ್ ಮಜೀದ್ ರವರು ಮೃತಪಟ್ಟಿದ್ದನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಹೇಳುತ್ತಾರೆ. ಸದರಿಯವರು ಕಾಳೇನಹಳ್ಳಿಯಲ್ಲೇ ಮೃತಪಟ್ಟಿರುತ್ತಾರೆ. ಅಬ್ದುಲ್ ಮಜೀದ್ ರವರು ಬದುಕಿರುವವರೆಗೂ ಅವರ ಕುಟುಂಬದೊಡನೆ ವಾಸವಿದ್ದು, ಅವರು ಸಾಯುವ ಕಾಲಕ್ಕೆ ಶನಿವಾರ ಸಂತೆ ಹತ್ತಿರ ಬಿಡಸು ಗ್ರಾಮದಲ್ಲಿ ತೀರಿಕೊಂಡರು ಎಂದರೆ ಸಾಕ್ಷಿ ಕಾಳೇನಹಳ್ಳಿಯಲ್ಲೇ ತೀರಿಕೊಂಡರು ಎಂದು ಹೇಳುತ್ತಾರೆ. ಅಬ್ದುಲ್ ಮಜೀದ್ ರವರು ಸಾಯುವ ಕಾಲಕ್ಕೆ ಅವರ ಜನಾಂಗದರೊಂದಿಗೆ, ಹೆಂಡತಿ-ಮಕ್ಕಳೊಂದಿಗೆ ವಾಸ ಇದ್ದರು ಎಂರದೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪ್ರತಿವಾದಿಯರೇ ನೋಡುತ್ತಿದ್ದರು ಎಂದು ಹೇಳುತ್ತಾರೆ. ಅಬ್ದುಲ್ ಮಜೀದ್ ರವರು ಬೇರೆ ಜನಾಂಗದವರಾಗಿರುವುದರಿಂದ ಯಾವುದೇ ಮರಣ ಶಾಸನವನ್ನು ಪ್ರತಿವಾದಿಗಳ ತಂದೆಗೆ ಬರೆದುಕೊಟ್ಟಿಲ್ಲ, ಪ್ರತಿವಾದಿಗಳೊಂದಿಗೆ ಸೇರಿಕೊಂಡು ಬರೆದುಕೊಟ್ಟಿದ್ದಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬರೆದುಕೊಟ್ಟಿರುವುದನ್ನು ನಾನು ನೋಡಿಲ್ಲ ಎಂದು ಹೇಳುತ್ತಾರೆ.

ಪ್ರತಿವಾದಿಗಳು ನನ್ನ ಜಾತಿಯವರು ಹಾಗೂ ಸಂಬಂಧಿಕರು. ದಾವಾ ಆಸ್ತಿಯಲ್ಲಿ ವಾದಿಗಳೇ ಸ್ವಾಧೀನ ಇದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳೇ ಸ್ವಾ ಧೀನ ಇದ್ದರೂ, ಪ್ರತಿವಾದಿ ನಿಮ್ಮ ಜಾತಿಯವರು ಹಾಗೂ ಸಂಬಂಧಿಕರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.